# ಮೌನೇಶ್ವರರ ಹುಷಾರು, ಪರಾಕು, ಡಂಗುರ ಮತ್ತು ಸುವ್ವಿಹಾಡುಗಳು

**ವನಜಾಕ್ಷಿ ಮ. ಬಡಿಗೇರ**
ಸಂಶೋಧನ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಗತ್ತಿನ ಕತ್ತಲೆಯನ್ನು ಕಳೆಯಲೆಂದು ಜನಿಸಿ ಬಂದ ಚೇತನ. ಧರ್ಮಗಳ ಮಧ್ಯ ಭಾವೈಕ್ಯತೆಯನ್ನು ಸಾರಿರುವ ಭಾವೈಕ್ಯತೆಯ ಹರಿಕಾರ. ಸೂಫಿ ಮಾದರಿಯ ಸಂತ ಎನ್ನಿಸಿಕೊಂಡವರು ಶ್ರೀ ತಿಂಥಣಿ ಮೌನೇಶ್ವರರು. ಇವರು ಸಗರನಾಡೆಂದು ಪ್ರಸಿದ್ಧಿಯನ್ನು ಪಡೆದ ಸುರಪುರ ತಾಲೂಕಿನ ದೇವರಗೋನಾಳ ಗ್ರಾಮದ ಹಾವಪ್ಪ ಹಾವಮ್ಮರೆಂಬ ವಿಶ್ವಕರ್ಮ ದಂಪತಿಗಳ ಮಗನಾಗಿ 16–17ನೇ ಶತಮಾನದ ಕಾಲದಲ್ಲಿ ಜನಿಸಿದರು.

ಮೌನೇಶ್ವರರು ಜನಿಸಿರುವ 16–17ನೇ ಶತಮಾನದಲ್ಲಿ ಮಹ್ಮದೀಯರ ಆಳ್ವಿಕೆಯಿಂದ ಸಾಮಾಜಿಕ ಸ್ಥಿತಿಯು ಬಹಳೇ ಅಸ್ತವ್ಯಸ್ಥವಾಗಿತ್ತು. ಸಾಮಾನ್ಯ ಜನರ ಸ್ಥಿತಿಗತಿಯು ತೊಂದರೆಗೆ ಒಳಗಾಗಿತ್ತು. ಧರ್ಮಗಳ ಮಧ್ಯದಲ್ಲಿ ದ್ವೇಷಾಸೂಯೆಗಳು ಹುಟ್ಟಿಕೊಂಡಿದ್ದವು. ಸಾಮಾಜಿಕ ಕಾಳಜಿಯನ್ನು ಹೊಂದಿರುವ ಮೌನೇಶ್ವರರು ಸಮಾಜದ ಬದಲಾವಣೆಗೆ ಮುಂದಾದರು. ಜನರಲ್ಲಿ ಆಳವಾಗಿ ಬೇರೂರಿರುವ ಅಜ್ಞಾನ, ಮೂಡನಂಬಿಕೆಗಳನ್ನು ಕಳೆದರು. ಸತ್ಯ, ನ್ಯಾಯ ನೀತಿ ಮತ್ತು ಧರ್ಮಗಳಲ್ಲಿ ಸಾಮರಸ್ಯವನ್ನು ಮೂಡಿಸಲೆಂದು ತಾವೇ ವಚನಗಳನ್ನು ರಚಿಸಿ ನಾಡಿನಾದ್ಯಂತ ಸುತ್ತಾಡಿದರು. ವಚನಗಳನ್ನು ಬೋಧಿಸುತ್ತ ಜನತೆಯನ್ನು ಎಚ್ಚರಿಸಿದರು.

ಮೌನೇಶ್ವರರು ಸುಮಾರು 800ಕ್ಕೂ ಅಧಿಕವಾದ ವಚನಗಳನ್ನು ರಚಿಸಿದ್ದಾರೆ. ಈ ವಚನಗಳು ಜನರಿಗೆ ಬಾಳಿನ ದಾರಿದೀಪಗಳಾಗಿವೆ. ಮೌನೇಶ್ವರರ ವಚನಗಳನ್ನು ಕಾಲಜ್ಞಾನ, ಖಂಡಜ್ಞಾನ, ನೀತಿ ಮತ್ತು ಬೋಧ ಪಧಾನವಾದ ನಾಲ್ಕು ಪ್ರಕಾರದ ವಚನಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕಾಲಜ್ಞಾನಕ್ಕೆ ಸಂಬಂಧಿಸಿರುವ 'ಹುಷಾರು, ಫರಾಕು, ಡಂಗುರ ಮತ್ತು ಸುವ್ವಿಹಾಡಗಳು'. ಈ ವಚನಗಳ ಕುರಿತಾದ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಕಾಲಜ್ಞಾನ ಎಂಬ ಪದದ ಶಬ್ದಶಃ ಅರ್ಥವನ್ನು ನೋಡುವುದಾದರೆ ಕಾಲ+ಜ್ಞಾನ, ಕಾಲ–ಸಮಯ, ಗಳಿಗೆ, ಹೊತ್ತು ಮತ್ತು ಕಾಲಗಣನೆ. ಜ್ಞಾನ–ಅರಿವು, ತಿಳುವಳಿಕೆ ಎಂಬ ಅರ್ಥವನ್ನು ತಿಳಿದುಕೊಳ್ಳಬಹುದು. ಒಟ್ಟಾರೆಯಾಗಿ ಕಾಲಜ್ಞಾನವೆಂದರೆ 'ಕಾಲದ ಆಗುಹೋಗುಗಳನ್ನು ಸೂಚಿಸುವುದೇ ಕಾಲಜ್ಞಾನ'.

ಕಾಲಜ್ಞಾನ ವಚನಗಳ ರಚನೆಯು 12ನೇ ಶತಮಾದ ವೀರಶೈವ ಕ್ರಾಂತಿಯಿಂದ ಪ್ರೇರಿತವಾಗಿತ್ತು. ಅನಂತರದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳಲ್ಲಿ ಅಂದಂದಿನ ಯುಗಧರ್ಮ ಗರ್ಭಿಕರಿಸಿಕೊಂಡು ಜನತೆಯನ್ನು ಅಪಾಯದ ಸಂದರ್ಭದಲ್ಲಿ ಎಚ್ಚರಿಸುವ ಕಾರ್ಯ ಕವಿಗಳಿಂದ, ಸಂತರಿಂದ ಮತ್ತು ಅನುಭಾವಿಗಳಿಂದ ನಡೆಯಲ್ಪಟ್ಟಿತು. ವಿಜಯನಗರೋತ್ತರ ಕಾಲದಲ್ಲಿ ವಿರುಪಾಕ್ಷಪಂಡಿತ ಕಾಲಜ್ಞಾನ ಹೇಳಿದ್ದರೆ, ಸಂತರ/ಅನುಭಾವಿಗಳ ಸ್ಥಾನದಲ್ಲಿ ನಿಂತು ಕಾಲಜ್ಞಾನವನ್ನು ಹೇಳಿದವರು ಶ್ರೀ ತಿಂಥಣಿ ಮೌನೇಶ್ವರರು. ಅನುಭಾವಿಗಳು ಜಗತ್ತಿನ ಆಗುಹೋಗುಗಳನ್ನು ತಮ್ಮ ವಿಶಿಷ್ಟ ದೃಷ್ಟಿಕೋನಗಳಿಂದ ವಿವರಿಸುತ್ತಾರೆ. ತಿಂಥಣಿ ಮೌನೇಶ್ವರರಲ್ಲಿರುವ ಬೌದ್ಧಿಕ ಮುಗ್ಧತೆ, ಮುಕ್ತತೆ ಲೋಕದ ಸಮಸ್ತವನ್ನು ನಿರೂಪಕನ ದೃಷ್ಟಿಯಿಂದ ಕಾಣುವ ಮಾತನಾಡುವುದನ್ನು ಇವರ ವಚನಗಳಲ್ಲಿ ಕಾಣಬಹುದು.

ಉಳಿ, ಬಾಚಿ, ಚಮ್ಮಟಗೆ, ಚಾಣ, ಇಕ್ಕಳು, ಸುತ್ತಿಗೆ, ಬೊಕ್ಕಸಗೋಲು, ಮಳೆ ಮೋಡ, ಪ್ರಾಣಿ, ಪಕ್ಷಿ, ಪ್ರಕೃತಿ ಮುಂತಾದ ವಸ್ತುಗಳು ಜಗತ್ತಿನ ವಾಸ್ತವದಲ್ಲಿ ಪಡೆದ ಸ್ಥಾನಗಳೇನು? ಅವುಗಳ ಬಳಕೆಯ ವಿಧಾನಗಳನ್ನು ಗಮನಿಸಿ ಅವುಗಳಿಗೆ ವಿಶೇಷವಾದ ಅರ್ಥವನ್ನು ಕಲ್ಪಿಸಿ ತಮ್ಮ ವಚನಗಳಲ್ಲಿ ಹೇಳುತ್ತಾ ಸಾಗಿಸಿದ್ದಾರೆ ಮತ್ತು ತಮ್ಮ ಅನುಭವದಿಂದ ಸಾಧಿಸಿ ತೋರಿಸಿದರು.

ಕಾಲಜ್ಞಾನ ವಚನಗಳು ಸಂತನೊಬ್ಬನ ಅನುಭಾವಿಕತೆಯೇ ಹೊರತು ಜ್ಯೋತಿಷ್ಯವಲ್ಲ. ಜ್ಯೋತಿಷ್ಯಕ್ಕೂ ಕಾಲಜ್ಞಾನಕ್ಕೂ ವ್ಯತ್ಯಾಸವಿದೆ. ಜ್ಯೋತಿಷ್ಯ ಗುರುವಿನಿಂದ ಕಲಿಯುವುದಾದರೆ, ಕಾಲಜ್ಞಾನ ಸ್ವಾನುಭಾವದಿಂದ ತಿಳಿಯುವಂತಹದ್ದು ಆಗಿರುವುದು. ಕಾಲಜ್ಞಾನವು ಪ್ರಕೃತಿಯ ಆಗು ಹೋಗುಗಳೊಂದಿಗೆ ನಿರಂತರ ಸಂಪರ್ಕ ಮತ್ತು ಸೂಕ್ಷ್ಮಗ್ರಹಿಕೆ, ಕಾಲ ಮತ್ತು ಜ್ಞಾನ ತಿಳುವಳಿಕೆಯನ್ನು ಮೂಡಿಸುತ್ತದೆ.

ಕಾಲಜ್ಞಾನಿಗಳಿಗೆ 'ಓರಕಲ್' ಎಂದು ಕರೆಯುವರು. ಓರಕಲ್ ಎಂದರೆ ಪ್ರಸಾರ ಮಾಡುವವರು. ಕನ್ನಡದಲ್ಲಿ 'ಸಾರು ಅಯ್ಯ'ರು ಎಂದು ಕರೆಯುವರು.

## 1. ಮೌನೇಶ್ವರರ ಹುಷಾರು ವಚನಗಳು (ಹುಷಾರು–ಜನತೆಯನ್ನು ಎಚ್ಚರಿಸುವ ಮಾತುಗಳು)

ಭಕ್ತಗಣಂಗಳಿಗೆ ಯುಕ್ತಗಣಂಗಳಿಗೆ
ಮುಕ್ತ ಗಣಂಗಳೆ ಬಹುಹುಷಾರ

**ಭಕ್ತರು:** ಭಕ್ತಿಯ ಮಾರ್ಗದಲ್ಲಿ ನಡೆಯುವವರು. **ಯುಕ್ತರು:** ಯೋಗದಲ್ಲಿ ತೊಡಗಿರುವವರು. **ಮುಕ್ತರು:** ಸರ್ವಸಂಗ ಪರಿತ್ಯಾಗಿಗಳು. ಸಂಸಾರವನ್ನು ಮಾಡಿ ತುರೀಯವಾದ ಐಕ್ಯ ಸ್ಥಿತಿಯನ್ನು ತಲುಪಿರುವ ಎಲ್ಲ ಜನರು.

ಎಚ್ಚರ
ನಾ ಹೆಚ್ಚು ನೀ ಹೆಚ್ಚು ಎಂದು ನುಡಿಯ ಬೇಡಿ
ಹೆಚ್ಚಿನ ರುದ್ರರು ಬಂದಾರು

ಬಚ್ಚಿಟ್ಟ ನಿಮ್ಮ ದೇಹ
ಹೆಚ್ಚಿ ಹೋಳನೆ ಮಾಡಿ
ಕಿಚ್ಚನೆ ಇಕ್ಕುವರು ಬಹು ಹುಷಾರ

ನಾನೇ ಶ್ರೇಷ್ಠ ಎಂಬ ಅಹಂಕಾರ ಹೊಂದಿರುವ ಜನರನ್ನು ಟೀಕಿಸಿದ್ದಾರೆ.

ನಾ ಹೆಚ್ಚು, ನೀ ಹೆಚ್ಚು ಎಂದು ಅಹಂಕಾರದಿಂದ ಮಾತನಾಡಬೇಡಿ ಇಲ್ಲಿ ಎಲ್ಲರೂ ಸಮಾನರು. ಜಗದಲ್ಲಿರುವ ಎಲ್ಲ ಜನರಿಗಿಂತ ಶಿವಭಕ್ತರು ಹೆಚ್ಚಿನವರು. ಇವರು ಶಿವನ ಅಪ್ಪಣೆಯಿಂದ ಭೂಲೋಕಕ್ಕೆ ಬಂದವರು. 'ದೇಹವೆಂಬುದು ನಶ್ವರ, ಶಿವ ಎಂಬುದು ಸತ್ಯ' ಎಂಬುದನ್ನು ವಚನ ಮೂಲಕ ತೋರಿಸಿಕೊಟ್ಟಿದ್ದಾರೆ.

ಎಲ್ಲ ಬಲ್ಲೆನೆಂಬ ಬಲ್ಲತನವ ಬೇಡ
ಹಲ್ಲುಗಳ ಮುರಲಿಕ್ಕೆ ಅಲ್ಲಮಪ್ರಭು ಬಂದಾನು
ಖುಲ್ಲ ಮಾನವರಿಗೆ ತಿಳಿಯದು ಬಹುಹುಷಾರ

ನಾನೇ ಶ್ರೇಷ್ಠ ಎಂದು, ನನಗೆಲ್ಲ ತಿಳಿದಿದೆ ಎಂಬುದು ಸಾಮಾನ್ಯ ಜನರ ಧೋರಣೆ ಎಲ್ಲ ಬಲ್ಲವರು ತಾವೆಷ್ಟೇ ತಿಳಿದಿದ್ದರು ಅದು ಅಲ್ಲ ಎಂಬುದು ಅವರ ತಿಳುವಳಿಕೆ ನಾನು ಬಲ್ಲವನೆಂದು ಅಹಂಕಾರ ಪಡುವವರನ್ನು ಸರ್ವಜ್ಞನು ಬಂದು ಅವರ ಹಲ್ಲನ್ನು ಮುರಿದು ಗರ್ವವನ್ನು ಅಡಗಿಸುವನು.

ಎಚ್ಚರವ ಹೇಳಲಿಕ್ಕೆ ಅಚ್ಯುತನು ಬಂದಾನು
ನಿಮ್ಮ ಕಿಚ್ಚುಗಣ್ಣಿನವನ ಕೂಡ ಮತ್ಸರ ಸಲ್ಲದು
ಹುಚ್ಚು ಶಾಸ್ತ್ರವ ಬಿಟ್ಟು ಬಚ್ಚಿಟ್ಟು ನಂಬಿರೊ
ಭಕ್ತರಾದವರು ಬಹುಹುಷಾರ

ಹುಚ್ಚು ಶಾಸ್ತ್ರಗಳನ್ನು ನಂಬುವ ಭಕ್ತರನ್ನು ಎಚ್ಚರಿಸಲು ದೇವನು ಬರುವನು. ಡಾಂಭಿಕರು ನಿಮ್ಮನ್ನು ದಾರಿ ತಪ್ಪಿಸುವರು. ಎಲ್ಲವನ್ನು ಸತ್ಯವೆಂದು ನಂಬುವ ಭಕ್ತರೇ ಹುಷಾರ.

ಪತ್ತಾರರಿಗೆ ಪಟ್ಟವಾಗುವುದೆ ಸಹಜ
ದಿಟ್ಟರಾದವರು ಗಟ್ಯಾಗಿ ನೆಲೆಗೊಳ್ಳಿ
ಬಿಟ್ಟರೆ ಕೆಟ್ಟು ಹೋದಿರಿ ನೀವು
ಸೃಷ್ಟಿಗೆ ಕಾರಣಕರ್ತರು ಹೌದೆಂದು
ಗಟ್ಯಾಗಿ ನಂಬಿರೊ ಭಕ್ತರಾದವರು ಬಹುಹುಷಾರು

ಪತ್ತಾರರಿಗೆ ಪಟ್ಟವಾಗುವುದು ಬಂಗಾರವು ತುಟ್ಟಿಯಾಗಿ ಅಕ್ಕಸಾಲಿಗರಿಗೆ ಉದ್ಯೋಗ ಸೃಷ್ಟಿಯಾಗಿ ಆರ್ಥಿಕಸ್ಥಿತಿ ಸುಧಾರಿಸುತ್ತದೆ. ಕೆಲಸ ಮಾಡುವವರುಗಾಗಿ ಹುಡಕ ಬೇಕಾಗುತ್ತದೆನ್ನುವ ಅರ್ಥ ಒಂದಡೆಯಾದರೆ ವಿಶ್ವಕರ್ಮರನ್ನೆ ನೇರವಾಗಿ ಸಂಭೋಧಿಸಿ ಆತ್ಮವಿಶ್ವಾಸವನ್ನು ತುಂಬುತ್ತದೆ.

ಪತ್ತಾರರಿಗೆ ಪಟ್ಟವಾಗುವುದೆಂದರೆ ಹಿಂದೂಧರ್ಮ ಗುರುವಿಗಾಗುವ ಪಟ್ಟವಾಗಿದೆ. ಹಿಂದೂ ಧರ್ಮಗುರುವಿನ ಪಟ್ಟ ಈ ಗುರುವಿನ ಸ್ಥಾನಕ್ಕೆ ಬೇಕಾದ ಭಕ್ತಿ ಧೀರತನ ಮತ್ತು ದೃಢತೆಯನ್ನು ಪಡೆಯಬೇಕು. ಆಲಸ್ಯ ತಾತಸಾರ ಮಾಡಿದರೆ ಕೆಟ್ಟ ಹೋಗುವಿರಿ ಎಂದು ಎಚ್ಚರಿಸಿದ್ದಾರೆ.

ಹೇಸಿಗೆಯ ಮಾತೆಂದು ಬೇಸರ ನುಡಿಯಲಿಬೇಡ
ಸಾಸಿರ ನಾಮದ ಒಡೆಯ ಹೌದೆಂದು ನಿಮ್ಮ
ವಾಸಿ ಪಂಥವ ಬಿಟ್ಟು ಭಾಷೆ ಪಾಲಿಪ ದೇವನ
ಭಕ್ತರಾದವರು ಬಹುಹುಷಾರ.

ಸಾಸಿರ ನಾಮದ ಒಡೆಯರೆಂದರೆ – ಕೃಷ್ಣ, ರಾಮ, ವೀಠಲನ ಭಕ್ತರು ದೇವರನ್ನು ಕರೆಯುತ್ತಾರೆ. ವಾಸಿಪಂಥ ಎಂದರೆ – ದ್ವೇಷ, ಛಲಗಳನ್ನು ಸಾಧಿಸಬಾರದು. ಸಾಸಿರನಾಮದವರೆಂದು ಬೇರೆ ಧರ್ಮದವರೆಂದು ಅಸಹ್ಯ ತೋರದೆ ಸಹಿಷ್ಣುತೆಯಿಂದ ಇರಬೇಕು. ಯಾರೊಂದಿಗೂ ದ್ವೇಷ, ಛಲವನ್ನು ಸಾಧಿಸಬಾರದು. ಎಂದು ಹೇಳುವುದರ ಮೂಲಕ ನನ್ನ ಮಾತಿಗೆ ಬೇಸರ ಪಟ್ಟುಕೊಳ್ಳಬೇಡಿ ಎಂದು ಎಚ್ಚರದ ಮಾತುಗಳನ್ನಾಡಿದ್ದಾರೆ.

ಮೋನಯ್ಯನ ವಚನವು ಚಾಣದ ಹದನದಂತೆ

ನಾನು ನೀನೆಂಬ ಮಥನವ ಬಿಟ್ಟು
ಜ್ಞಾನವುಳ್ಳವರು ಬೇಕಾದರೆ ಬೇಕಾದರೆ ಬೆರಕೊಳ್ಳಿ ಸಾಕಾದರೆ ಸರಕೊಳ್ಳಿ
ಏಕವಾದರೆ ತಿಳಕೊಳ್ಳ ಲೋಕದಂತಾದರೆ
ಕರಕೊಳ್ಳಿ ಬಹುಹುಷಾರ

ಮೌನೇಶ್ವರರು ತಮ್ಮ ವಚನಗಳು ತೀಕ್ಷ್ಣವಾಗಿರುತ್ತದೆ. ವಚನಗಳು ಕಠೋರ ಸತ್ಯವನ್ನು ಖಡಾಖಂಡಿತವಾಗಿ ಹೇಳುತ್ತವೆ. ಬೇಧಗಳನ್ನು ಬಿಡಿರಿ ಜ್ಞಾನಿಗಳಾಗಿರಿ ಎಂಬುದನ್ನು ವಚನದಲ್ಲಿ ಹೇಳಿದ್ದಾರೆ. ಮೌನೇಶ್ವರರ ಬೋಧೆ ಮತ್ತು ಐಕ್ಯತೆಯ ತತ್ವ, ಲೋಕಕಲ್ಯಾಣಕ್ಕೆ ಉಪಯುಕ್ತವಾದ ವಚನಗಳಾಗಿವೆ. ಬೇಕಾದವರು ಬೆರಕೊಳ್ಳಿ ಎಂಬ ಮಾತಿನಲ್ಲಿ ಹೊಂದಾಣಿಕೆಯ ಗುಣ ಮನುಷ್ಯನಿಗೆ ಮುಖ್ಯವಾದುದೆಂಬ ಬಾವ ಇದೆ.

2. **ಫರಾಕು ವಚನಗಳು ( ಜಯಘೋಷ, ಜೈಕಾರದ ವಚನಗಳು)**

ಆದಿಮೂರುತಿ ಅಲ್ಲಮಪ್ರಭು ಮುಲ್ಲಮಹಮ್ಮದ
ರಸೂಲಿಲ್ಲ ಬಹುಪರಾಕು

ಹಿಂದೂ–ಮುಸ್ಲಿಂರ ಸಾಮರಸ್ಯ ಸಾಧಿಸಿದ ಮಹಾತ್ಮರು ತಿಂಥಣಿ ಮೌನೇಶ್ವರರು. ಅಲ್ಲಮಪ್ರಭು ಮತ್ತು ಮಹ್ಮದ ಇಬ್ಬರು ಬೇರೆಬೇರೆ ಎಂದು ಸ್ತುತಿಸಲಾಗುತ್ತದೆ. ಆದರೆ ಗುಡಿಗಳಲ್ಲಿ ನಡೆಯುತ್ತಾ ಬಂದಿರುವ ಸ್ತುತಿ ಘೋಷವೂ ಮುಸ್ಲಿಂ ಅಲ್ಲಾಹು, ಹಿಂದೂಗಳ ಕಾಶಿಪತಿ ಹರಹರ ಮಹಾದೇವ ಇಬ್ಬರು ಒಂದೇ ಎಂಬುದನ್ನು ತಿಳಿಸುತ್ತದೆ.

ಉನ್ಮನಿಯ ದೇವದುರ್ಗಕ್ಕೆ ಪ್ರಭು ಬರುವುದೇ ಸಹಜ
ಯರಮಲ ದೊರೆಯು ವರವಿ ಪಾಚ್ಛಾ ಮೌನ ಬಹುಪರಾಕು

ಮನದ ಉನ್ನತ ಸ್ಥಿತಿ ಉನ್ಮನಿ. ಇಲ್ಲಿ ಉನ್ನತವಾದ ಶ್ರೇಷ್ಠವಾದ ಎಂಬರ್ಥವಿದೆ. ಶ್ರೇಷ್ಠವಾದ ಅಲ್ಲಮಪ್ರಭು ಬರುವುದು ಸಹಜ. ಈತ ಯರಮಲ ಸೀಮೆಯ ದೊರೆ. ವರವಿ ಕ್ಷೇತ್ರದ ಒಡೆಯ. ಒಡೆಯನಿಗೆ ಜೈಕಾರ ಹಾಕುವರು.

ಈ ವಚನದಲ್ಲಿರುವ ಪ್ರಭು ಎಂಬುದು ಮೌನೇಶ್ವರರಿಗೆ ಅನ್ವಯವಾಗುತ್ತದೆ. ತಾವು ದೇವರೆಂದು ಭಾವಿಸುವ ಅಲ್ಲಮಪ್ರಭುವಿಗೆ ಜಯವಾಗಲಿ ಎಂದು ಪರಾಕು ಹೇಳುತ್ತಾರೆ.

ಕಾರಣಿಕ – ನುಡಿದದ್ದು ನಿಜವಾಗುವುದು ಎಂದರ್ಥ. ಕಾರಣಿಕ – ದೇವರ ವರದಿಂದ ಹುಟ್ಟಿದವನು. ದೇವರವರ ಪಡೆದವನು. ಎಂಬ ಅರ್ಥಗಳಿರುವುದನ್ನು ಗಮನಿಸಬಹುದು. ಚನ್ನಬಸವಣ್ಣನು ಕಾರಣಿಕಪುತ್ರನು. ಕಾರಣಿಕ ಪುರುಷನು ಆತನು ಕಾರುಣ್ಯ ನಿಧಿಯೂ ಆಗಿ ಕೈ ಹಿಡಿದು ನಡೆಸುವ ಅಯ್ಯನಾಗಿದ್ದಾನೆ. ಧಾರಣೀಪತಿ(ಅರಸು) ಆಧ್ಯಾತ್ಮಲೋಕಕ್ಕೆ ಧಾರ್ಮಿಕ ಸಾಮ್ರಾಜ್ಯಕ್ಕೆ ಚನ್ನಬಸವಣ್ಣನಂಥವರೇ ಆಳರಸರು. ಇವರಿಗೆ ಎಲ್ಲರೂ ತಲೆಬಾಗುತ್ತಾರೆ. ಇಂತಹ ಚನ್ನಬಸವಣ್ಣನಿಗೆ ಬಹುಪರಾಕು.

ನರಜನ್ಮಕ್ಕೆ ನರಸಿಂಹ ನರರೊಳಗೆ ಅವತರಿಸಿ
ಧರೆಗೆ ಬಂದನಯ್ಯ ನಂದಿ ನಾರಾಯಣ ಬಹುಪರಾಕು

ನರರಲ್ಲಿಯೇ ಶ್ರೇಷ್ಠನಾದವನು ನರಸಿಂಹ ಪುರುಷ ಸಿಂಹ. ಅಂತಹ ಶ್ರೇಷ್ಠವಾದ ನಾರಾಯಣನು ಭೂಲೋಕದಲ್ಲಿ ಮಾನವರೂಪದಲ್ಲಿ ಅವತರಿಸಿ ಬಂದಿದ್ದಾನೆ.

ಈಶ್ವರನ ವಾಹನ ನಂದಿಯನ್ನು ವಿಷ್ಣುವಿನ ಒಂದು ಹೆಸರಾದ ನಾರಾಯಣ ಎಂಬುದನ್ನು ಜೋಡಿಸಿರುವುದು ಶೈವ ವೈಷ್ಣವ ಪಂಥಗಳ ಜೋಡಣೆಯಾಗಿದೆ. ನರರೊಳಗೆ ಜನಿಸಿ ಬಂದ ನರಸಿಂಹನಾಗಿ ಬಂದುದ್ದು ಬಸವಣ್ಣನವರಿಗೆ ಸರಿಹೊಂದುತ್ತದೆ.ಆತನು ನಾರಾಯಣನೂ ಹೌದು ಎಂಬುದು ಮೌನಪ್ಪಯ್ಯನವರದೇ ಆದ ಪರಿಭಾವನೆ.

ಉಳವಿಯ ಮಹಾಮನೆಯಲ್ಲಿ ದಂಡು ಇಳಿದು ಜಗಕ್ಕೆಲ್ಲ ಅದರೊಳಗೆ
ಬಳಲಿ ಬಂದ ಶರಣ ಗಣಂಗಳಿಗೆ ಬಹುಪರಾಕು

ಕಲ್ಯಾಣ ಕ್ರಾಂತಿಯ ವಿಷಯ ಜನಜನಿತವಾಗಿರುವಂಥದ್ದು. ಬಿಜ್ಜಲನ ಕೊಲೆಯಾದ ಮೇಲೆ ಶರಣರ ಜಂಗಮರ ಬೇಟೆಯಾಡುತ್ತ ಬಿಜ್ಜಳನ ದಂಡು ಚೆನ್ನಬಸವಣ್ಣ ಅಕ್ಕನಾಗಮ್ಮರ ಮುಂದಾಳತ್ವದಲ್ಲಿ ದಂಡು ಕಲ್ಯಾಣದಿಂದ ಹೊರಟಿತು. ಧಾರವಾಡ ಮಾರ್ಗವಾಗಿ ಉಳವಿಯ ಕಡೆಗೆ ಸಾಗಿತು. ದಟ್ಟ ಅರಣ್ಯದಲ್ಲಿ ವೈರಿ ಸೈನ್ಯದ ಕೈಗೆ ಸಿಗದೆ ಉಳಿದುಕೊಂಡಿತು ಉಳವಿಯ ಮಹಾಮನೆಯ ದಣಿದು ಬಳಲಿದ ಶರಣರ ದಂಡನ್ನು ಮೌನೇಶ್ವರರು ಈ ವಚನದಲ್ಲಿ ನೆನೆಯುತ್ತಾರೆ.

ಅಮರ ಕಲ್ಯಾಣದೊಳು ಅಮರ ಲೆಕ್ಕಕ್ಕೆ
ಅನುವಾಗಿ ನಿಂತಿಯಯ್ಯ ದೊರೆ ರಾಜೇಂದ್ರ ಬಹುಪರಾಕು

12ನೇ ಶತಮಾನದ ಶರಣರು ದಿಕ್ಕಾಪಾಲಾಗಿ ಹೋದ ಮೇಲೆ ಶರಣರ ವಿಚಾರಕ್ರಾಂತಿ ಅಡಗಿ ಹೋಯಿತು. 15ನೇ ಶತಮಾನದಲ್ಲಿ ವಿಜಯನಗರದಲ್ಲಿ ಪ್ರೌಢದೇವರಾಯನ ಮುಕ್ತಚಿಂತನೆಯ ಪ್ರೋತ್ಸಾದಿಂದ ಅಡಗಿಸಿಟ್ಟಿದ್ದ ವಚನಗಳನ್ನು ಹುಡುಕಿ ತೆಗೆದು ಅವುಗಳಿಗೆ ಅರ್ಥ, ಟೀಕೆ ಸಂಪಾದನೆ, ವರ್ಗೀಕರಣದ ಕಾರ್ಯಗಳು ಪ್ರಾರಂಭವಾದವು.

ವಿಜಯನಗರ ಸಾಮ್ರಾಜ್ಯ ಪತನವಾಗಿ ಮುಸ್ಲಿಂರ ಆಡಳಿತ ಪ್ರಾರಂಭವಾದಾಗ ಹಿಂದೂ ಧರ್ಮವನ್ನು ಉಳಿಸಿಕೊಳ್ಳುವ ಧರ್ಮಧರ್ಮಗಳ ಸಾಧಿಸಬೇಕಾದ ಸಂದರ್ಭ ಒದಗಿದಾಗ ಗುಲ್ಬರ್ಗಾ ಜಿಲ್ಲೆಯ ಕೊಡೆಕಲ್ಲಿನ ಬಸವಣ್ಣನವರಿಂದ ಇನ್ನೊಂದು ಕ್ರಾಂತಿಯಾಯಿತು. ಕೊಡೆಕಲ್ಲನ್ನು ಅಮರಕಲ್ಯಾಣವೆಂದು ಕರೆಯಲಾಗುತ್ತದೆ.

ಇರುವುದು ವರವಿ ಮೆರೆವುದು ಲಿಂಗನಬಂಡಿ
ಸ್ಥಿರವಾದದ್ದು ತಿಂಥಣಿ ನಮ್ಮ ನರಕುರಿಗಳ ಕಾಯ್ವ

ಪ್ರಭುದೇವ ಮೌನ ಬಹುಪರಾಕು

ಯಾದಗಿರಿ ಜಿಲ್ಲೆಯ ಗೋನಾಳದಲ್ಲಿ ಹುಟ್ಟಿದ ಮೌನೇಶ್ವರರು ತಮ್ಮ ದೈವಿಶಕ್ತಿ ಸಾಧನೆಗಳಿಂದ ಉತ್ತರಕರ್ನಾಟಕದಲ್ಲಿ ಪವಾಡಪುರುಷರಾಗಿ ಬೆಳೆದು ಸಾಕ್ಷಾತ ಪರಮಾತ್ಮನ ಅವತಾರವೆಂದು ಪ್ರಸಿದ್ಧರಾಗಿದ್ದಾರೆ. ಲಿಂಗನಬಂಡಿಗಳಲ್ಲಿ ಲೀಲೆಗಳನ್ನು ಮೆರೆದು ತಿಂತಿಣಿಯಲ್ಲಿ ಸ್ಥಿರವಾಗಿ ನೆಲೆನೆ ಐಕ್ಯಗೊಂಡಿದ್ದಾರೆ. ತಾವು ನರಕುರಿಗಳನ್ನು ಅಜ್ಞಾನಿ, ಮಂದ ಮಾನವರ ಕಾಯುವ ಪ್ರಭುದೇವ ಮೌನ ಎಂದು ಹೇಳಿಕೊಂಡಿದ್ದಾರೆ. ಅಲ್ಲಮಪ್ರಭುವಿನ ಅವತಾರವೇ ಮೌನೇಶ್ವರರು ಎಂಬ ಅರ್ಥವಿದೆ.

**3. ಡಂಗುರ ವಚನಗಳು (ಹೊಯ್ಯಲಿ ಡಂಗುರ)**

ಗುರುವಿಟ್ಟು ಮುಂಡಿಗಿ ಗುರುತದಿ ಮಾಡಿದ
ನರರಿಗೆ ತಿಳಿಯದಿನ್ಯಾರಿಗೆ ಉಳಿವಿಲ್ಲ

ಗುರುವಿಟ್ಟ ಮುಂಡಿಗೆ (ಒಗಟು, ಭವಿಷ್ಯ ಸೂಚಕ ಮಾತುಗಳು) ಗುರುವಿನ ಮಾತಿನಂತೆ ಮಾಡಿದ ಕಾರ್ಯವು ಸಾಮಾನ್ಯರಿಗೆ ತಿಳಿಯುವುದಿಲ್ಲ. ಜಗತ್ತಿನಲ್ಲಿ ಯಾರೂ ಸ್ಥಿರವಲ್ಲ.

ಪ್ರಾಣಿ ಮಾತ್ರಕೆಲ್ಲ ಪರಮಾತ್ಮನೊಬ್ಬನ
ಕಾಣದ ಮಾತನು ಕಂಡು ಹೇಳತೀನಿ
ಜಗತ್ತಿನ ಪ್ರತಿಯೊಂದು ಜೀವಿಗೆ ಪರಮಾತ್ಮನು ಒಬ್ಬನೆ.
ಗಮ್ಮನೆ ಗಜವೇರಿ ನಿಮ್ಮೊಳು ತೀರ್ಥ ಪ್ರಸಾದವ ಕೊಳ್ಳಿ
ಕಾಮನ ಕಣ್ಣು ಕಳೆದು ಸುಮ್ಮನಾಗಿರಿ

ಆನೆಯ ಮೇಲೇರಿದವರೂ ಹಮ್ಮು ಮರೆತು ಪರಮಾತ್ಮನ ತೀರ್ಥಪ್ರಸಾದವನ್ನು ವಿನಯ ಭಕ್ತಿಗಳಿಂದ ತೆಗೆದುಕೊಳ್ಳಿರಿ ಕಾಮ ಭಾವನೆಯನ್ನು ಅಳಿದು ಭಕ್ತಿಯಿಂದಿರಿ.

**4. ಸುವ್ವಿ ಹಾಡುಗಳು**

ಜನಪದ ಹಾಡುಗಳಲ್ಲಿ ಒಂದು ಪ್ರಕಾರವಾಗಿದೆ. ಸುವ್ವಿ ಎಂದರೆ ಶಿವನನ್ನು ನೆನೆಯುವ ಜಾನಪದರ ಸ್ವರೂಪ. ಶುಭವಾಗಲಿ ಎಂಬ ಅರ್ಥವನ್ನು ತಿಳಿಯಬಹುದು.

ಸುವ್ವಿ ಬಾ ಸಂಗಯ್ಯ ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಬಸವಯ್ಯ
ಸುವ್ವಿ ಬಾ ಚನ್ನಬಸವಯ್ಯ ಬರುವಾಗ
ಹೊಯ್ಯಲಿ ಬೊಬ್ಬಿ ಜಗವೆಲ್ಲ

ಸಂಗಯ್ಯ ಲಿಂಗಯ್ಯ ಎಂದು ಶಿವಧ್ಯಾನವನ್ನು ಮಾಡುತ್ತ ಚೆನ್ನಬಸವಯ್ಯನಿಗೂ ಶುಭ ಹಾರೈಸುತ್ತಾರೆ.

ಕಾಯಕವೇ ಕಮ್ಮಾರ ಜೀವವೇ ಮುನಿದೈವ
ವಾಯು ಅಗ್ನಿಯು ಪರಬ್ರಹ್ಮ
ವಾಯು ಅಗ್ನಿಯು ಪರಬ್ರಹ್ಮ ಇದ್ದಲ್ಲಿ
ಸಾವಿರ ದೈವಗಳು ನಿರ್ಮಿತವು ಸುವ್ವಿ

ಏಕದೇವನಿಂದ ಅನೇಕ ದೇವಗಳು ಸೃಷ್ಟಿಯಾದ ಬಗೆಯನ್ನು ಹೇಳುತ್ತದೆ. ಪಂಚಭೂತಗಳೇ ಈ ಸೃಷ್ಟಿಗೆ ಕಾರಣವು ಆಕಾಶ ಸ್ವರೂಪನಾದ ಪರಬ್ರಹ್ಮ, ವಾಯು ಅಗ್ನಿಗಳೇ ತಾನಾಗಿದ್ದಾನೆ. ಕಾಯ ಜೀವಿಗಳು ಮರ್ತ್ಯಲೋಕದಲ್ಲಿ ಪರಮಾತ್ಮನ ಸಾಕಾರ ರೂಪಗಳು. 'ಕಮ್ಮಾರನು ವಾಯು ಅಗ್ನಿಗಳ ತತ್ವಗಳ ಮೂಲಕ ಅನೇಕ ದೈವಗಳ ಸೃಷ್ಟಿಗೆ ಕಾರಣ ಕರ್ತನಾಗಿದ್ದಾನೆ.

ಇಕ್ಕಳವೇ ಕುಲದೈವ ಸುತ್ತಿಗೆಯು ಮುನಿದೈವ
ಬೊಕ್ಕಸಗೋಲು ಜಗದಂಡ
ಬೊಕ್ಕಸಗೋಲು ಜಗದಂಡ ಇದ್ದಲ್ಲಿ
ಲಕ್ಷ ದೈವಗಳು ನಿರ್ಮಿತವು ಸುವ್ವಿ

ಹಿಂದೂ ಧರ್ಮದಲ್ಲಿರುವ ಅನೇಕ ದೇವರಗಳ ನಿರ್ಮಾಣಕ್ಕೆ ವಿಶ್ವಕರ್ಮರೇ ಕಾರಣ ಎಂಬುದು ಈ ವಚನದ ಇಂಗಿತ. ಇಕ್ಕಳ ಸುತ್ತಿಗೆ ಬೊಕ್ಕಸಗೋಲು ಆಯುಧಗಳಿಂದಲೇ ಕಲ್ಲು ಮಣ್ಣು ಕಟ್ಟಿಗೆ ಲೋಹಾದಿಗಳಲ್ಲಿ ಪತ್ರಿಮೆ ಮಾಡುತ್ತದೆ. ಈ ಆಯುಧಗಳೇ ಅವರಿಗೆ ಕುಲದೈವ ಮನೆ ಹಾಗೂ ದೈವಗಳು (ಕುಲುಮೆ, ಉಳಿ, ಕೊಡಲಿ, ಚಾಣಗಳನ್ನು ಮೂಲವೆಂದು ಹೇಳಲಾಗುತ್ತದೆ.)

ಕಮ್ಮಾರ ತಾನಾದ ಕಮಲಲೋಚನ ಆದ
ಚಮ್ಮಟಗಿ ಆದ ದೈತ್ಯರಿಗೆ
ಚಮ್ಮಟಗಿ ಆದ ದೈತ್ಯರಿಗೆ ಪರಬ್ರಹ್ಮನ
ಹಮ್ಮು ಕೇಳುವವನ ಹೆಸರೇನು ಸುವ್ವಿ

ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ಗುರುತಿಸಲು ಬ್ರಹ್ಮ, ವಿಷ್ಣು, ಶಿವ ಎಂಬ ತ್ರಿಮೂರ್ತಿ ರೂಪಗಳನ್ನು ಹಿಂದೂ ಧರ್ಮದಲ್ಲಿ ಕಲ್ಪಿಸಲಾಗಿದೆ. ಪುರುಷ ಪ್ರಕೃತಿ ತತ್ವಗಳನ್ನು ಸೇರಿ ಬ್ರಹ್ಮಾಂಡ ಸೃಷ್ಟಿಯಾಗಿದೆ. ಶಿವ–ಪಾರ್ವತಿ, ವಿಷ್ಣು–ಲಕ್ಷ್ಮಿ, ಬ್ರಹ್ಮ–ಸರಸ್ವತಿ ಹೀಗೆ ದಂಪತಿ ದೈವಗಳನ್ನು ಕಲ್ಪಿಸಲಾಗಿದೆ. ಮಾನವೀಯತೆಯನ್ನು ನೆಲೆಗೊಳಿಸಲು ದೇವರಿಗೆ ಮನೆ ಮಕ್ಕಳನ್ನು ಕಲ್ಪಿಸಲಾಗಿದೆ. ಈ

ಎಲ್ಲ ಬಹುಇತ್ವದ ಹಿಂದೆ ಏಕದೇವ ಪರಬ್ರಹ್ಮನ ತತ್ವವೇ ಇದೆ. ಇದು ಅಗಾಧವಾದುದು. ಆತನ ಮಹಿಮೆಯನ್ನು ಯಾವನು ಪ್ರಶ್ನಿಸಲು ಸಾಧ್ಯ?

ಅಂಗಕ್ಕೆ ವಸ್ತ್ರನಾದ ಲಿಂಗಕ್ಕೆ ಪೀಠಾದ
ಜಂಗಮನು ತಾನಾದ ಜಗಕ್ಕೆಲ್ಲ
ಜಂಗಮನು ತಾನಾದ ಜಗಕ್ಕೆಲ್ಲ ಪರಬ್ರಹ್ಮನ
ಅಂಗ ಹೋಲುವವನ ಹೆಸರೇನು ಸುವ್ವಿ

ಈ ಜಗಕ್ಕೆ ಪರಮಾತ್ಮನೊಬ್ಬನೇ ಮೂಲ ಕರ್ತೃ. ಪರಬ್ರಹ್ಮನೇ ಅಂಗ ಲಿಂಗ ಜಂಗಮಗಳ ವಿಭಿನ್ನ ರೂಪಗಳನ್ನು ತಳೆದ. ಅಂಗ ಮುಚ್ಚುವ ಬಟ್ಟೆಯೂ ಅವನೇ. ಲಿಂಗವಾದ ಆಧಾರವಾದ ಪೀಠವೂ ಅವನೆ. ದೇವನೇ ಅನುಪಮ ಏಕಮೇವ ಅದ್ವೀತಿಯ.

ಅಲ್ಲಧಿಕವಾದ ಮುಲ್ಲಗ ಚೂರ್‍ಯಾದ
ಕಲ್ಲು ತಾನಾದ ಜಗಕ್ಕೆಲ್ಲ
ಕಲ್ಲು ತಾನಾದ ಜಗಕ್ಕೆಲ್ಲ ಪರಬ್ರಹ್ಮ
ಸೊಲ್ಲು ಕೇಳುವವನ ಹೆಸರೇನು ಸುವ್ವಿ

ಮುಸ್ಲಿಂರ ದೈವ ಅಲ್ಲಾನಿಗೂ, ಹಿಂದೂಗಳ ಏಕದೇವ ಪರಬ್ರಹ್ಮನಿಗೂ ತಾದಾತ್ಮವಿದೆ. ಪರಬ್ರಹ್ಮನ ಕಲ್ಪನೆಯು ಅಲ್ಲಾನಿಗಿಂತಲೂ ವಿಶಾಲವಾದುದು. ಮುಲ್ಲಾನ ಆಯುಧ ಚೂರಿಯೂ ಆತನೇ ಜಗತ್ತಿನ ಕಲ್ಲಗಳೆಲ್ಲ ಅವನೇ ಕಲ್ಲಿನ ದೇವರುಗಳೆಲ್ಲ ಅವನೇ ಇಂತಹ ದೇವನ ಬಗ್ಗೆ ಬಣ್ಣಿಸಲು ಮತ್ತು ಪ್ರಶ್ನಿಸಲು ಸಾಧ್ಯವಿಲ್ಲ.

ಅಪ್ಪಗ ಜೀವನ ಕೊಟ್ಟ ಮುಪ್ಪಿಗೆ ಕೋಲನ ಕೊಟ್ಟ
ಕಪ್ಪರ ಕೊಟ್ಟ ಜಗಕ್ಕೆಲ್ಲ
ಕಪ್ಪರ ಕೊಟ್ಟ ಜಗಕ್ಕೆಲ್ಲ ಪರಬ್ರಹ್ಮನ
ತಪ್ಪು ಕೇಳುವವನ ಹೆಸರೇನು ಸುವ್ವಿ

ಮಾನವರಿಗೆಲ್ಲ ಆತನೇ ಜೀವಕೊಟ್ಟ, ಅನ್ನ ಬದುಕು ಬಾಳುಗಳನ್ನು ಕೊಟ್ಟ ಕೊನೆಗೆ ಮುಪ್ಪಿನಲ್ಲಿ ಆಸರೆಯಾಗುವ ಊರು ಗೋಲನ್ನು ಕೊಟ್ಟನು. ತಿರಿದುಣ್ಣುವ ಭಿಕ್ಷಾಪಾತ್ರೆಯನ್ನು ಆತನೇ ಕೊಟ್ಟ ಜಗತ್ತಿನ ಜೀವ ಬದುಕು ಆಸರೆ ಎಲ್ಲವೂ ಆತನು ಕೊಟ್ಟಂತಹುಳೇ ಆತನಲ್ಲಿ ತಪ್ಪು ಹುಡುಕಲು ನಾವೆಷ್ಟವರು.

ಹೆಡಗಿ ಬುಟ್ಟಿಯ ಕೊಟ್ಟ ಗಡಿಗಿ ಕೋಲನೆ ಕೊಟ್ಟ
ಬಡಿಯುವದು ಕೊಟ್ಟ ಕಲಿಯುಗಕ್ಕೆ
ಬಡಿಯುವುದು ಕೊಟ್ಟ ಕಲಿಯುಗಕ್ಕೆ ಪರಬ್ರಹ್ಮನ
ಗೊಡವಿಗ್ಹೋಗವನ ಹೆಸರೇನು ಸುವ್ವಿ

ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ ಪರಮಾತ್ಮ ಇದ್ದಾನೆ. ಮಾನವನಿಗೆ ಎಲ್ಲವನ್ನು ಬಳಿಸಿಕೊಂಡು ಬದಕಲು ಹೇಳಿಕೊಟ್ಟಿದ್ದಾನೆ. ಹೆಡಗಿಬುಟ್ಟಿ ಗಡಿಗಿಕೋಲು ಬಡಿಯುವ ಆಯುಧ ಮುಂತಾದವು ಮಾನವ ನಿರ್ಮಿತವೇ ಆದರೂ ಅವುಗಳನ್ನು ಮಾಡಿಕೊಳ್ಳುವ ಮತ್ತು ಬಳಿಸಿಕೊಳ್ಳುವ ತಿಳಿವಳಿಕೆ ಕಲೆ, ಜಾಣ್ಮೆ ಎಲ್ಲವೂ ಆತನೇ ದಯಪಾಲಿಸಿರುವನು. ಆತನ ತಂಟೆಗೆ ಹೋಗುವವ ಮಹಾ ಮೂರ್ಖನು. ದೇಶಕಧಿಕವಾದ ಮುಂಡಿಗೆಯನ್ನು ಹಾಕಿದವನು ಮೌನೇಶ್ವರರಲ್ಲದೆ ಬೇರೆ ಯಾರೂ ಆಗಿರಲು ಸಾಧ್ಯವಿಲ್ಲ. ಪರಬ್ರಹ್ಮ ಸರ್ವವ್ಯಾಪಿ. ಸರ್ವಾಂತರಯಾಮಿ. ಇಡಿ ಪ್ರಪಂಚವೇ ಆಗಿರುವಾಗ ಆತನ ದೇಶ ಸ್ಥಳ ಯಾವುದೆಂದು ಕೇಳುವುದು ದಡ್ಡತನ.

ಹೀಗೆ ಮೌನೇಶ್ವರರು ನೂರಾರು ಕಾಲಜ್ಞಾನದ ವಚನಗಳನ್ನು ರಚಿಸಿದ್ದಾರೆ. ಆ ಪ್ರಕಾದಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದಾರೆ. ಇನ್ನೂ ಹೆಚ್ಚಿನ ಕಾಲಜ್ಞಾನ ವಚನಗಳು ಅಂಕಿತವನ್ನು ಪಡೆದಿದ್ದು ಮೂರು ಸಾಲಿನ ಮುಕ್ತಕಗಳಾಗಿವೆ. ಈ ಮುಕ್ತಕಗಳು ಅಂದಿನ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ವಿವರಗಳನ್ನು ನೀಡುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಜೀವಣ್ಣ ಮಸಳಿ.(ಸಂ). : ಶ್ರೀ ಮೌನೇಶ್ವರ ವಚನಸಂಗ್ರಹ ವಿಶ್ವದರ್ಶನ ಪ್ರಕಾಶನ ಬಾಗಲಕೋಟೆ 1987
2. ಜೀವಣ್ಣ ಮಸಳಿ.(ಸಂ). : ಶ್ರೀ ಮೌನೇಶ್ವರ ತ್ರಿಪದಿಗಳು. ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ ಹುಬ್ಬಳ್ಳಿ 2004
3. ಪಡಶೆಟ್ಟಿ, ಎಂ. ಎಂ : ತಿಂಥಣಿ ಮೋನಪ್ಪಯ್ಯ: ಒಂದು ಅಧ್ಯಯನ. ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀಜಗದ್ಗುರು ತೋಂಟದಾರ್ಯ ಗದಗ 1990
4. ವೀರೇಶ ಬಡಿಗೇರ. : ತಿಂತಿಣಿ ಮೌನೇಶ್ವರರ ವಚನಗಳು. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರ. ಸಂಪಾದಕರು 2016